15

# ಮುನ್ನುಡಿ (ಯೂದ)

ಯೂದನ ಪತ್ರಿಕೆಯು, 2ನೇ ಪೇತ್ರನ ಪತ್ರಿಕೆಯಲ್ಲಿರುವ ವಿಷಯಗಳನ್ನೆ ಸಾಮಾನ್ಯವಾಗಿ ಹೊಂದಿರುತ್ತದೆ. ಯೂದ ಮತ್ತು 2 ಪೇತ್ರ 2ರಲ್ಲಿ, ಸಂದರ್ಭದ ವಿಷಯದಲ್ಲಿ ಸಮನಾಗಿರುತ್ತದೆ. ಆದುದರಿಂದ ಪೇತ್ರನ 2ನೇ ಪತ್ರಿಕೆಯೊಂದಿಗೆ, ಯೂದನ ಪತ್ರಿಕೆಯನ್ನು ಧ್ಯಾನಿಸುವುದು ಯೋಗ್ಯವಾಗಿರುತ್ತದೆ. 2ನೆಯ ಪೇತ್ರ ಮತ್ತು ಯಾದನ ಪತ್ರಿಕೆಯಲ್ಲಿರುವ ವಿಷಯಗಳು 1 ಪೇತ್ರನ ಪತ್ರಿಕೆಯಲ್ಲಿರುವಂಥ ಸಂಗತಿಗಳಿಂದ ವಿಭಿನ್ನವಾಗಿರುತ್ತದೆ, ಆದರೆ ಉತ್ತಮವಾದ ಜೀವಿತಕ್ಕೂ ಮತ್ತು ಕ್ರಿಸ್ತನ ದೇಹದ ಬಲವರ್ದನೆಗೂ, ಕಡಿಮೆ ಯೋಗ್ಯವುಳ್ಳದ್ದಾಗಿರುವದಿಲ್ಲ.

## ಗ್ರಂಥಕರ್ತನು

"ಯೇಸು ಕ್ರಿಸ್ತನ ದಾಸನೂ ಯಾಕೋಬನ ತಮ್ಮನು ಆಗಿರುವ ಯೂದನು" ಎಂದು ತನ್ನ ವ್ಯಕ್ತಿತ್ವದ ಇರುವಿಕೆಯನ್ನು ತೋರ್ಪಡಿಸಿದನು (ವಚನ 1). ಯಾಕೋಬನು ಯಾರು ಎಂದು ನಾವು ಅರಿಯುವುದಾದರೆ, ಯೂದನು ಯಾರು ಎಂಬುದಾಗಿ ಸಾಮಾನ್ಯವಾಗಿ ಅರಿಯು ತ್ತೇವೆ. ಆದಿ ಸಭೆಯಲ್ಲಿ, ಯಾಕೋಬನ ಹೆಸರು ಪ್ರಮುಖವಾಗಿ ಪ್ರಸಿದ್ಧಿಗೊಂಡ ಹೆಸರಾಗಿತ್ತು. ಯಾಕೋಬನು ಕರ್ತನ ತಮ್ಮನು ಎಂಬುದರಲ್ಲಿ ಸಂದೇಹವಿಲ್ಲ (ಅಪೊಸ್ತಲರಕೃತ್ಯಗಳು 15:13; 21:18; ಗಲಾತ್ಯ 1:19). ಯಾಕೋಬನ ಪತ್ರಿಕೆಯನ್ನು ಬರೆದವನು ಇವನೇ ಮತ್ತು ಪುನರುತ್ಥಾನವಾದ ಯೇಸು ಇವನಿಗೆ ಪ್ರತ್ಯಕ್ಷವಾಗಿದ್ದನು (1 ಕೊರಿಂಥ 15:7). ಯಾಕೋಬನು ಯಾರು ಎಂದು ಯೂದನು ಮುಂದುವರಿಸುತ್ತಿಲ್ಲ, ಯಾಕೆಂದರೆ ಯಾಕೋಬನ ಕುರಿತಾದ ಹೆಚ್ಚಿನ ವಿವರದ ಅಗತ್ಯವಿರಲಿಲ್ಲ. ಆದಿ ಸಭೆಯಲ್ಲಿ ಈ ರೀತಿಯ ವ್ಯಕ್ತಿತ್ವವನ್ನು ಹೊಂದಿದವನು ಯಾಕೋಬನು ಮಾತ್ರ, ಅವನ ಹೆಸರು ಚಿರ ಪರಿಚಿತವಿತ್ತು. ಜೆಬೆದಾಯನ ಮಗನಾದ ಯಾಕೋಬನು, ಯೂದನ ಪತ್ರಿಕೆಯು ಲಿಖಿತವಾಗುವದಕ್ಕಿಂತ ಅನೇಕ ವರ್ಷಗಳ ಮೊದಲೇ ಅವನನ್ನು ಮರಣಕ್ಕೆ ಒಪ್ಪಿಸಿದರು (ಅಪೊಸ್ತಲರಕೃತ್ಯಗಳು 12:1, 2).

ಯಾಕೋಬ, ಯೋಸೆಯ (ಅಥವಾ ಯೋಸೆ), ಸೀಮೋನ್, ಮತ್ತು ಯೂದ (ಅಥವಾ ಯೂದನು) (ಮತ್ತಾಯ 13:55; ಮಾರ್ಕ 6:3). ಎಂಬ ಸಹೋದರರನ್ನು ಕರ್ತನು ಹೊಂದಿದ್ದನು. ಯೇಸು ಕ್ರಿಸ್ತನ ಜೀವಾನಾವದಿಯಲ್ಲಿ ಆತನ ಸಹೋದರರು ಆತನನ್ನು ಕ್ರಿಸ್ತನು ಎಂದು ನಂಬದೆ, ಅಪಹಾಸ್ಯ ಮಾಡುವರ ಸಂಗಡ ಸೇರಿಕೊಂಡಿದ್ದರು (ಯೋಹಾನ 7:1-5). ಒಂದು ವೇಳೆ ಯಾಕೋಬನು ಮೊದಲು ನಂಬಿ ನಂತರ ಇತರರಿಗೆ ತಿಳಿಸಿರಬಹುದು. ಪೌಲನು 1 ಕೊರಿಂಥವನ್ನು ಬರೆಯುವ ಸಮಯದಲ್ಲಿ, ಕರ್ತನ ಸಹೋದರರು ಪ್ರಸಿದ್ಧಿ ಪಡೆದ ಬೋಧ ಕರು ಮತ್ತು ಪ್ರಸಂಗಿಗಳು ಆಗಿದ್ದರು (1 ಕೊರಿಂಥ 9:5). ಯಾಕೋಬನಾಗಲೀ ಅಥವಾ ಯಾವನಾಗಲೀ, ತಾವು ಕರ್ತನ ಸಹೋದರರು ಎಂದು ತಮ್ಮ ಪತ್ರಿಕೆಗಳ ಮುನ್ನುಡಿಗಳಲ್ಲಿ ಪರಿಚಯಿಸಿಕೊಳ್ಳಲಿಲ್ಲ. ಅವರು ಕರ್ತನ ದಾಸರು ಎಂದು ಪರಿಚಯಿಸಿಕೊಳ್ಳುವದರಲ್ಲಿ ತೃಪ್ತರಾಗಿದ್ದರು.

## ಬರೆಯಲ್ಪಟ್ಟ ಸಂದರ್ಭ

2 ಪೇತ್ರ 2ರಲ್ಲಿ ಸುಳ್ಳು ಪ್ರವಾದಿಗಳ ಕುರಿತಾಗಿ ವಿವರಿಸುವ ವಿಷಯಗಳು ಯೂದನ ಪತ್ರಿಕೆಯಲ್ಲಿಯೂ ಸಮನಾಗಿರುತ್ತದೆ. ಪರಿಸ್ಥಿತಿಯು ಸಹ ಒಂದೇ ಆಗಿದ್ದರಿಂದ, ಯೂದನು ಪೇತ್ರನು ಪತ್ರಿಕೆಯಿಂದ ಸಹಜವಾಗಿ ಕೆಲವು ವಿಷಯಗಳನ್ನು ಪಡೆದಿದ್ದಾನೆ. ಪೇತ್ರನು

ಭವಿಷತ್‌ಕಾಲದ ಕುರಿತು ಎಚ್ಚರಿಸಿದ್ದರೆ, "ಅದೇ ಪ್ರಕಾರ ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು" (2 ಪೇತ್ರ 2:1), ಗತಿಸಿ ಹೋದ ಕಾಲದಲ್ಲಿ ಸುಳ್ಳು ಬೋಧಕರುಗಳು ಸಭೆಗಳಲ್ಲಿ ನುಸುಳಿದ್ದರು ಎಂದು ಯೂದನು ತಿಳಿಸಿದ್ದಾನೆ. ಸಾಮಾನ್ಯವಾದ ರಕ್ಷಣೆಯ ಕುರಿತು ಪ್ರೋತ್ಸಾಹ ದಾಯಕವಾದ ಪತ್ರವನ್ನು ಯೂದನು ತನ್ನ ಸ್ನೇಹಿತರಿಗೆ ಬರೆಯ ಬೇಕೆಂದಿದ್ದನು, ಆದರೆ ಸುಳ್ಳು ಬೋಧಕರುಗಳು ಸಭೆಗೆ ಉಂಟುಮಾಡುತ್ತಿದ ಭಯೋತ್ಪಾದನೆಯನ್ನು ತಿಳಿದವನಾಗಿ ನಂಬಿಕೆಯನ್ನು ಕಾಪಾಡಿಕೊಳ್ಳಿರಿ ಎಂದು ಬರೆದನು (ಯೂದ 3).

ಯೂದನ ಪತ್ರಿಕೆಯು ಅನೇಕ ಪ್ರಶ್ನೆಗಳನ್ನು ನೀಡುತ್ತದೆ ಅದರಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರಿಸಲಾಗದು ಇತರೆ ಪ್ರಶ್ನೆಗಳಿಗೆ ಅರ್ಥವುಳ್ಳ ಊಹೆಗಳನ್ನು ಮಾತ್ರ ಮಾಡಬಹುದು. ಪೇತ್ರನ ಮತ್ತು ಯೂದನ ಮಾತುಗಳು ಪರಸ್ಪರ ಬಲಪಡಿಸುತ್ತವೆ. ಯೂದನು ಸಹ ಪೇತ್ರನ ಓದುಗರ ಸರಹದ್ದಿನಲ್ಲಿರುವ ಸಭೆಗಳಿಗೆ ತನ್ನ ಪತ್ರಿಕೆಯನ್ನು ಬರೆದನು ಎಂಬ ಮಾಹಿತಿ ಮಾತ್ರ ನಮಗೆ ದೊರಕುತ್ತದೆ. ಯೂದನು ಒಂದು ಸಮುದಾಯಕ್ಕೂ ಮತ್ತು ಪೇತ್ರನು ಇತರರಿಗೆ ಪ್ರಭಾವಿತರಾಗಿಬಹುದು. ಸಭೆಗಳಿಗೆ ತೊಂದರೆ ನೀಡುತ್ತಿದ ಸುಳ್ಳು ಬೋಧಕರಿಗೆ ವಿರುದ್ಧವಾಗಿ ಮಾತನಾಡುವದರಲ್ಲಿ ಯೂದನು ಪೇತ್ರನೊಂದಿಗೆ ಸಮಭಾಗಿಯಾಗಿದ್ದನು ಎಂದು ತೋರಿ ಸಿಕೊಂಡಿದ್ದನು. ಬಹುಶಃ ಪೇತ್ರನು ತನ್ನ 2 ನೇ ಪತ್ರಿಕೆಯನ್ನು ಬರೆದ ಕೆಲವು ವರುಷಗಳ ನಂತರ, ಯೂದನು ತನ್ನ ಪತ್ರಿಕೆಯನ್ನು ಬರೆದಿರಬಹುದು. ಅದು ಕ್ರಿ.ಶ. 60 ಅಥವಾ 70ರಲ್ಲಿ ಇರಬಹುದು. ಅವನು ತನ್ನ ಓದುಗರ ಇತಿಹಾಸದ ಸಂಬಂಧದಲ್ಲಿ ಬರೆಯುವಾಗ, ಅವನು ಯಾವ ಸ್ಥಳದಲ್ಲಿ ಇದ್ದನು ಎಂಬ ಸೂಚನೆಯನ್ನು ಈ ಪತ್ರಿಕೆಯಲ್ಲಿ ಕಾಣುವದಿಲ್ಲ.

---

## ಯೂದ ಪತ್ರಿಕೆಯ ಮುಖ್ಯಾಂಶ

ವಂದನಾರ್ಪಣೆ: (ವಚನಗಳು 1, 2)

I. ದೇವರನ್ನು ನಿರಾಕರಿಸುವವರು ತೀರ್ಪಿಗೆ ಒಳಗಾಗುವರು (ವಚನಗಳು 3-7)

II. ದೇವರು ದೈವಭಕ್ತಿ ಇಲ್ಲದವರ ಸೊಕ್ಕನ್ನು ತಿರಸ್ಕರಿಸುತ್ತಾನೆ (ವಚನಗಳು 8-16)

III. ದೇವರು ತನ್ನವರನ್ನು ಪ್ರೀತಿಸುತ್ತಾನೆ (ವಚನಗಳು 17-23)

ಅಂತ್ಯ ವಚನ (ವಚನಗಳು 24, 25).